**<u>ದಿನಾಂಕ:28-07-2022 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಆರ್.ಕೆ.ಕೆ ವಕೀಲರಿಂದಃ</u>**

ನನ್ನ ಸಾಕ್ಷ್ಯಪ್ರಮಾಣ ಪತ್ರ ಬರೆಯಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ದಾವಾ ಆಸ್ತಿಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ಸ್ವತ್ತು ನನ್ನ ಅಜ್ಜನ ಕಾಲದಿಂದ ಬಂದ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ಎಂಬ ಬಗ್ಗೆ ಉತಾರಗಳನ್ನು ನಾನು ನೋಡಿಲ್ಲ. ನನ್ನ ತಂದೆ ಗೌಸ್ ಸಾಬ್ ರವರು 2014 ರಂದು ಮೃತಪಟ್ಟರು. ದಾವಾ ಆಸ್ತಿಗಳು ಸುಮಾರು 30-35 ವರ್ಷಗಳಿಂದಲೂ ಸಹ 6 ನೇ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿ. ಸಾಕ್ಷಿಯು ಅವರೇ ದಾಖಲೆಗಳನ್ನು ಮಾಡಿಕೊಂಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ದಾವಾ ಐಟಂ ನಂ.2 ರ ಸ್ವತನ್ನು ದಸ್ತಗೀರ್ ಸಾಬ್ ಮತ್ತು ಜೈನಾಬಿಗೆ ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ಈ ರೀತಿ ಬಿಟ್ಟುಕೊಟ್ಟ ಕಾರಣ ತಹಶೀಲ್ದಾರರವರ ಕಚೇರಿಯಲ್ಲಿ ಡ ನಂಬರ 2053 ಮಂಜೂರಾಗಿದೆ ಎಂದರೆ ಸಾಕ್ಷಿಯು ಅವರೇ ಮಾಡಿಕೊಂಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಆ ಆಸ್ತಿಯನ್ನು ಬಿಟ್ಟುಕೊಟ್ಟ ಸಂದರ್ಭದಲ್ಲಿ ಜೈನಾಬಿ ಮತ್ತು ದಸ್ತಗೀರ್ ಸಾಬ್ ಅಪ್ರಾಪ್ತರಾಗಿದ್ದಾರೆ ಎಂದರೆ ಸರಿ. ಅಂದಿನಿಂದ ಇಲ್ಲಿಯವರೆಗೂ ಸಹ ಅವರ ಹೆಸರಿನಲ್ಲಿಯೇ ದಾಖಲೆಗಳಿವೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಬಿ ಆಸ್ತಿಯನ್ನು ನನ್ನ ತಂದೆಯವರು ಜೈನಾಬಿ ಮತ್ತು ದಸ್ತಗೀರ್ ಸಾಬ್ ರವರಿಗೆ ಬಿಟ್ಟುಕೊಟ್ಟಿದ್ದು, ಈ ಬಗ್ಗೆ ಡ ನಂಬರ 2668 ರಂತೆ ಮಂಜೂರಾಯಿತು ಎಂದರೆ ಸರಿಯಲ್ಲ. ದಸ್ತಗೀರ್ ಸಾಬ್ ನನ್ನ ಅಣ್ಣ. ಆತ ಐದು ವರ್ಷಗಳ ಹಿಂದೆ ಮೃತಪಟ್ಟರು. ಆತ ಬದುಕಿದ್ದ ಸಂದರ್ಭದಲ್ಲಿ ದಾವಾ ಆಸ್ತಿಗಳಸಲ್ಲಿ ಆತನೇ ಕಬ್ಜಾ ವಹಿವಾಟು ಮಾಡುತ್ತಿದದರು ಎಂದರೆ ಸರಿಯಲ್ಲ. ಸಾಕ್ಷಿಯು ಎಲ್ಲರೂ ಕೂಡಿಯೇ ಮಾಡುತ್ತಿದ್ದೆವು ಎಂದು ಸ್ವತಃ ನುಡಿಯುತ್ತಾರೆ. ನಾನು ಎಂದೂ ಸಹ ದಾವಾ ಆಸ್ತಿಗಳನ್ನು ಮತ್ತು ಅವುಗಳ ದಾಖಲೆಗಳನ್ನು ನೋಡಿಲ್ಲ, ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ ವರ್ಷ ದಾವಾ ಆಸ್ತಿಗಳಲ್ಲಿ ಗೋವಿನ ಜೋಳದ ಬೆಳೆ ಬೆಳೆಯಲಾಗಿತ್ತು. ಈ ವರ್ಷ ದಾವಾ ಆಸ್ತಿಗಳಲ್ಲಿ ಅವರುಗಳೇ ಬೆಳೆ ಬೆಳೆದಿರುತ್ತಾರೆ. ಆ ಮನೆಗಳಲ್ಲಿ ಜೈನಾಬಿ ಒಂದು ಮನೆಯಲ್ಲಿ ದಸ್ತಗೀರ್ ಸಾಬ್ ಮಕ್ಕಳು ಮತ್ತೊಂದು ಮನೆಯಲ್ಲಿ ವಾಸವಾಗಿದ್ದಾರೆ ಎನ್ನುವುದು ಸರಿ. ನಮ್ಮ ಮೂರು ಜನ ಮಕ್ಕಳನ್ನು ಮದುವೆಯ ಮಾಡುವ ಸಂದರ್ಭದಲ್ಲಿ ನನ್ನ ತಂದೆ ತಾಯಿಯವರು ಬದುಕಿದ್ದರು. ದಾವಾ ಆಸ್ತಿಗಳಲ್ಲಿ ಬಂದ

ಆದಾಯದಿಂದಲೇ ನಮ್ಮ ಮೂರು ಜನ ಹೆಣ್ಣು ಮಕ್ಕಳನ್ನು ಸಾಕಷ್ಟು ಖರ್ಚು ಮಾಡಿ ಮದುವೆ ಮಾಡಿಕೊಟ್ಟರು ಎಂದರೆ ಸರಿ. ಆದರೆ ಏನನ್ನು ಸಹ ಕೊಟ್ಟಿಲ್ಲ ಎಂದು ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಜೈನಾಬಿ ಮತ್ತು ದಸ್ತಗೀರ್ ಸಾಬ್ ರವರಿಗೆ ಬಿಟ್ಟುಕೊಟ್ಟಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಕಳೆದ 35 ವರ್ಷಗಳಿಂದಲೂ ಸಹ ದಾವಾ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯನ್ನು ಬಿಟ್ಟುಕೊಟ್ಟ ಸಂದರ್ಭದಲ್ಲಿ ನಾನು ಚಿಕ್ಕವಳಾಗಿದ್ದೆ. ನನ್ನ ಮದುವೆ ಯಾವ ವರ್ಷ ಆಯಿತು ಎಂಬುದು ನನಗೆ ಗೊತ್ತಿಲ್ಲ. ನನಗೆ ಇಬ್ಬರೂ ಮಕ್ಕಳಿದ್ದಾರೆ. ನನ್ನ ದೊಡ್ಡ ಮಗಳಿಗೆ 25 ವರ್ಷ ವಯಸ್ಸಾಗಿರುತ್ತದೆ. ದಾವಾ ಆಸ್ತಿ ಎಷ್ಟು ಕಿಮ್ಮತ್ತು ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೇ ನಂಬರ ಮತ್ತು ವಿಪಿಸಿ ನಂಬರ್ ಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಕೋರಿ ಪ್ರತಿವಾದಿಯರ ಬಳಿ ನಾವು ಮೂರು ಜನ ಹೋಗಿದ್ದೆವು. ಆ ದಿನ ಪ್ರತಿವಾದಿಯರನ್ನು ಹಿಸ್ಸೆ ಕೊಡುವಂತೆ ಕೋರಿದ್ದು, ಅವರು ನಿರಾಕರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಂದೆ-ತಾಯಿಯರು ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿರಿಂದ ಹಿಸ್ಸೆ ಕೇಳಲು ನಮಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಎಂದೂ ಸಹ ನಮ್ಮ ಕುಟುಂಬದ ಆಸ್ತಿಗಳ ಬಳಿ ಹೋಗಿಲ್ಲ ಎಂದರೆ ಸರಿಯಲ್ಲ. ಮದುವೆಯ ಸಂದರ್ಭದಲ್ಲಿ ಸಾಕಷ್ಟು ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುವುದರಿಂದ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಇಬ್ಬರೂ ಸಹೋದರಿಯರು ಖಾಯಂತರೀಕವಾಗಿ ಸಾಯುವವರೆಗೆ ಗೋವಾದಲ್ಲಿಯು ಇದ್ದರು ಎಂದರೆ ಸರಿ. ದಾವಾ ಐಟಂ ಬಿ ಆಸ್ತಿಯಲ್ಲಿ ಜೈನಾಬಿಯವರಗೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ

ಹಾನಗಲ್